# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:130/2015-16

ದಿನಾಂಕ:30.08.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ**

******

**ವಾದಿಗಳು: ಶ್ರೀ/ ಶ್ರೀಮತಿ**

1] ಟಿ.ರಾಮ್ ಪ್ರಸಾದ್ ತಂದೆ ಲೇಟ್ ಟಿ.ನಾರಾಯಣ ರಾವ್,

2] ಟಿ.ಪ್ರಕಾಶ್ ರಾವ್ ತಂದೆ ಲೇಟ್ ಟಿ.ನಾರಾಯಣ ರಾವ್,

ವಾಸ: ತಟ್ಟಿ ಕೇರಿ, ವೆಂಕಟರಮಣ ಪರಮನೆಂಟ್ ಭಂಡಾರ ಲಿಮಿಟೆಡ್ ಹತ್ತಿರ, ಹರಪನಹಳ್ಳಿ-583131 ದಾವಣಗೆರೆ ಜಿಲ್ಲೆ.

[ಶ್ರೀ ಎ.ವಸುದೇಂದ್ರ, ವಕೀಲರು, ಹೊಸಪೇಟೆ ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಟಿ.ಪ್ರಹ್ಲಾದ್ ತಂದೆ ಲೇಟ್ ಟಿ.ಪಾರ್ಥಸಾರಥಿ, ವಾಸ: ತಟ್ಟಿ ಕೇರಿ, ವೆಂಕಟರಮಣ ಪರಮನೆಂಟ್ ಭಂಡಾರ ಲಿಮಿಟೆಡ್ ಹತ್ತಿರ, ಹರಪನಹಳ್ಳಿ-583131 ದಾವಣಗೆರೆ ಜಿಲ್ಲೆ.
2. ಕಂದಾಯ ನಿರೀಕ್ಷಕರು, ಇಟ್ಟಿಗಿ
3. ತಹಶೀಲ್ದಾರರು, ಹೂವಿನಹಡಗಲಿ.

******

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಇಟ್ಟಿಗಿ | ಮುಸುಕಿನ ಕಲ್ಲಹಳ್ಳಿ | 89/ಎ | 05 ಎಕರೆ 47 ಸೆಂಟ್ಸ್ |

**ಪೀಠಿಕೆ:-**

ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಮುಸುಕಿನ ಕಲ್ಲಹಳ್ಳಿ ಗ್ರಾಮದ ವಿವಾದಾಸ್ಪದ ಜಮೀನು ಸ.ನಂ.89/ಎ ವಿಸ್ತೀರ್ಣ: 05 ಎಕರೆ 47 ಸೆಂಟ್ಸ್; ಜಮೀನುನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಇಟ್ಟಿಗಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:11/2010-11 ದಿನಾಂಕ:01.09.2010 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಅಪೀಲುದಾರರ ಪರ ವಕೀಲರು ದಿನಾಂಕ:01.01.2016 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಸದರಿ ಪ್ರಶ್ನಿತ ಆದೇಶಕ್ಕೆ ಮುಂದಿನ ವಿಚಾರಣೆ ದಿನಾಂಕದವರೆಗೆ ಮಾತ್ರ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:26.09.2011 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಾದಿಪರ ವಕೀಲರು ದಿನಾಂಕ:02.08.2016 ರಂದು ವಿಚಾರಣೆ ಸಂದರ್ಭದಲ್ಲಿ ಹಾಜರಾಗಿ, ಉಭಯ ಪಕ್ಷಗಾರರು ರಾಜೀಯಾಗಿರುವುದರಿಂದ ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಒತ್ತಾಯಿಸದೇ ಇರುವ ಮೆಮೋವನ್ನು ಸಲ್ಲಿಸಿರುತ್ತಾರೆ. ಆದುದರಿಂದ, ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ವಾದಿಪರ ವಕೀಲರು ಉಭಯ ಪಕ್ಷಗಾರರು ರಾಜೀಯಾಗಿರುವುದರಿಂದ ಸದರಿ ಪಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿ ಮನವಿಯನ್ನು ಸಲ್ಲಿಸಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:30.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ: ಪ್ರತಿವಾದಿಗಳಿಗೆ

**ಪ್ರತಿಯನ್ನು:-** ತಹಶೀಲ್ದಾರರು, ಹಡಗಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.